ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ರಾಯಚೂರು ಅರಣ್ಯ ವಿಭಾಗ, ರಾಯಚೂರು**

ವಿಳಾಸ: ಕೋರ್ಟ ರಸ್ತೆ, ರಾಯಚೂರು-584101, ದೂರವಾಣಿ ಸಂಖ್ಯೆ: 08532-230029, ಫ್ಯಾಕ್ಸ್: 08532-230029, ಈ-ಮೇಲ್: dcf.trcr@gmail.com

ಸಂ: ಎ6/ಸರ್ವೆ/JSW/ಸಿಆರ್-/2016-17/2590 ದಿನಾಂಕ: 02-02-2017

ಗೆ,

JSW Steel Limited,
Vidyanagar works:
P.O. Vidyanagar-583275
Dist: Ballaary.

ಮಾನ್ಯರೇ,

ವಿಷಯ: Request for suitability report for the following identified land to transfer to Forest Department on behalf of JSW Steel Ltd. for raising of Compensatory afforestation-reg,

ಉಲ್ಲೇಖ:
1. JSW Steel Limited, Vidyanagar works: Dist: Ballaary. ಇವರ ಪತ್ರದ ದಿನಾಂಕ: 25-01-2017.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಯಚೂರು ಇವರ ಪತ್ರ ಸಂಖ್ಯೆ: ಸಅಸಂ/ರಾಉವಿ/ಲಿಂ.ವ/ಸಿಆರ್/2016-17ದಿನಾಂಕ:30-01-2017.
3. ವಲಯ ಅರಣ್ಯ ಅಧಿಕಾರಿಗಳು, ಮಾನವಿ ಇವರ ಪತ್ರ ಸಂಖ್ಯೆ: ವಅಅ/ಲಿಂ.ವ/ಸಿಆರ್-/2016-17, ದಿನಾಂಕ: 25-01-2016

\- \- \-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ (1) ರ ಪ್ರಕಾರ ನೀವು ಲಿಂಗಸುಗೂರು ವಲಯದ ಹಾಲಭಾವಿ ಗ್ರಾಮದಲ್ಲಿ 250.85 ಎಕರೆ (101.52 ಹೇ) ಗಳ ಪಟ್ಟಾ ಭೂಮಿಯನ್ನು ಮತ್ತು ತಿಮ್ಮಾಪೂರು ಗ್ರಾಮ ಹೊ॥ ಮಸ್ಕಿ ತಾ॥ ಲಿಂಗಸುಗೂರು ಜಿ॥ ರಾಯಚೂರು ರಲ್ಲಿ 128.57 ಎಕರೆ (52.03 ಹೇ) ನಲ್ಲಿ ಪಟ್ಟಾ ಜಮೀನುಗಳಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಹಾಗೂ ಸದರಿ ಪಟ್ಟಾ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಉದ್ದೇಶಿಸಿದ್ದು ಸದರಿ ಸರ್ವೆ ನಂಬರ್‌ಗಳಲ್ಲಿರುವ ಜಮೀನು ಅರಣ್ಯೀಕರಣಕ್ಕೆ ಯೋಗ್ಯವೇ ಎಂಬ ಬಗ್ಗೆ ವರದಿಯನ್ನು ನೀಡಲು ಕೋರಿರುತ್ತೀರಿ.

ಈ ಬಗ್ಗೆ ವಲಯ ಅರಣ್ಯ ಅಧಿಕಾರಿಗಳು ಲಿಂಗಸುಗೂರು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಯಚೂರು ಇವರು ಸ್ಥಳ ಪರಿಶೀಲನೆ ಮಾಡಿ ಕ್ರಮವಾಗಿ ಉಲ್ಲೇಖ (2) ಮತ್ತು (3) ರ ಪತ್ರಗಳ ಪ್ರಕಾರ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಹಾಲಭಾವಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 39, 107, 121 & 137 ರಿಂದ 143 ಸರ್ವೆನಂಬರ್‌ಗಳ ಒಟ್ಟು ವಿಸ್ತೀರ್ಣ ಪಹಣಿ ಪತ್ರಿಕೆಯ ಪ್ರಕಾರ 250.850 ಎಕರೆ ಇದ್ದು (101.52 ಹೇ) ಸದರಿ ಪ್ರದೇಶವು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿದ್ದು ಸದರಿ ಪ್ರದೇಶ ಶೇ 15 ರಿಂದ ಶೇ 20 ರಷ್ಟು ಭಾಗಶಃ ಕಲ್ಲು ಬಂಡೆಗಳಿಂದ ಕೂಡಿದ್ದು ಹಾಗೂ ಇನ್ನುಳಿದ

ಪ್ರದೇಶವು ಕುರಚಲು ಸಸ್ಯವರ್ಗದಿಂದ ಆವೃತಗೊಂಡಿದೆ. ಸದರಿ ಪ್ರದೇಶದಲ್ಲಿ ಅಂದಾಜು ಶೇಕಡಾ ಶೇ 15 ರಿಂದ ಶೇ 20 ರಷ್ಟು ಭೂಮಿಯಲ್ಲಿ ANR Model ನಲ್ಲಿಯೂ ಇನ್ನುಳಿದ ಪ್ರದೇಶದಲ್ಲಿ ವಿವಿಧ ಮಾದರಿಯಡಿ ಅರಣ್ಯೀಕರಣ ಕಾಮಗಾರಿ ಕೈಗೊಳ್ಳಲು ಯೋಗ್ಯವಿರುತ್ತದೆ.

ಅದರಂತೆ ತಿಮ್ಮಾಪೂರು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 74/1, 74/2, 74/4, & 74/5 ಸರ್ವೆನಂಬರ್‌ಗಳ ಒಟ್ಟು ವಿಸ್ತೀರ್ಣ ಪಹಣಿ ಪತ್ರಿಕೆಯ ಪ್ರಕಾರ 128.57 ಎಕರೆ (52.03 ಹೇ) ಇದ್ದು ಸದರಿ ಪ್ರದೇಶವು ಕೂಡ ಅರಣ್ಯ ಪ್ರದೇಶಕ್ಕೆ ಸಮೀಪದಲ್ಲಿದ್ದು, ಅಲ್ಲಲ್ಲಿ ಕುರಚಲು ಸಸ್ಯಗಳು ಬೇಳೆದಿರುವುದು ಕಂಡುಬರುತ್ತದೆ. ಸದರಿ ಪ್ರದೇಶವು ಅರಣ್ಯೀಕರಣ ಕಾಮಗಾರಿ ಕೈಗೊಳ್ಳಲು ಸೂಕ್ತವಿರುತ್ತದೆ. ಎಂದು ಅಭಿಪ್ರಾಯ ನೀಡಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ರಾಯಚೂರು ಅರಣ್ಯ ವಿಭಾಗ, ರಾಯಚೂರು.

ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕಲಬುರಗಿ ವೃತ್ತ, ಕಲಬುರಗಿ ಇವರಿಗೆ ಮಾಹಿತಿಗಾಗಿ ಸಲ್ಲಸಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ರಾಯಚೂರು ಅರಣ್ಯ ವಿಭಾಗ, ರಾಯಚೂರು.